> ಆ ಕಂದೀಲ ಬೆಳಕಲ್ಲಿ ಅಕ್ಕನನ್ನು ಗುರುತಿಸಿದ. ಶಿವರಾವು ಮಾತಾಡಲಿಲ್ಲ. ಕೊರಳನ್ನು ಯಾರೋ ಒತ್ತಿ ಹಿಡಿದಂತೆನಿಸಿತು. ಮೈಯೊಳಗಿನ ನೀರೆಲ್ಲ ಕಣ್ಣೀರಾಗಿ ಹೊರಬರಲು ಸಿದ್ಧವಾದಂತಿತ್ತು ಆತನ ನೋಟ...

ನಾಳೆ ನಾಡದ್ದರೊಳಗೆ ತನಗೆ ಜ್ವರ ಬರೋದು ಗ್ಯಾರಂಟಿ. ನಿರಂತರ ಜೈಲುವಾಸ ಶಿವರಾವ್‌ನ ದೇಹತತ್ವವನ್ನು ಸಂಪೂರ್ಣವಾಗಿ ಬದಲಿಸಿಬಿಟ್ಟಿತ್ತು. ಈ ನಾಲ್ಕೈದು ವರ್ಷಗಳಲ್ಲಿ ಅವನ ಆರೋಗ್ಯ ಇನ್ನಷ್ಟು ಹದಗೆಟ್ಟಿತ್ತು. ಕೀಲು ನೋವು, ಹವಾ ಬದಲಾದರೂ ನೀರು ಬದಲಾದರೂ ಜ್ವರ ಬರೋದು ಆಗ್ತಿತ್ತು. ಅಲ್ಲಲ್ಲಿ ಮೈ ಸ್ವಲ್ಪ ಉಬ್ಬಿಕೊಂಡಂತೆಯೂ ಇತ್ತು. ಅದನ್ನು ಇತ್ತೀಚೆಗಷ್ಟೇ ಗಮನಿಸಿದ್ದ ಶಿವರಾವುಗೆ ಅದು ಯಾವ ರೋಗವೆಂಬುದು ಮಾತ್ರ ಅರ್ಥವಾಗಿರಲಿಲ್ಲ.

ಆ ಓಣಿಯ ಮೊದಲ ತುದಿಗೆ ನಿಂತ. ಗೋಪಾಲನ ಅಂಗಡಿ ಅಲ್ಲೇ ಇತ್ತು. ಪರೀಕ್ಷಿಸಿ ನೋಡಿದ. ಗೋಪಾಲ ಕೂತಿದ್ದ ಅಂಗಡೀಲಿ.

"ಚಾರ್ಮಿನಾರ್ ಸಿಗರೇಟ್" ಅಂದ ಶಿವರಾವ್.

"ಏನು? ಪ್ಯಾಕಾ ಕೊಡ್ಲಾ?" ಅಂದ ಗೋಪಾಲ.

"ಇಲ್ಲ ಸಿಗರೇಟ್."

ಸಿಗರೇಟು ಹಚ್ಚಿಕೊಂಡು ಸ್ವಲ್ಪ ಹೊತ್ತು ಅಲ್ಲೇ ನಿಂತ.

ಆ ಓಣಿಯಲ್ಲಿ ತನ್ನ ಮನೆಯ ಬಗ್ಗೆ ಕೇಳುವುದೋ ಬೇಡವೋ ಎಂದು ಸಂದಿಗ್ಧಕ್ಕೊಳಗಾದ. ಸಣ್ಣವನಿದ್ದಾಗಿಂದಲೂ ಗೋಪಾಲನಿಗೆ ತಮ್ಮ ಮನೆ ಗೊತ್ತಿರೋದೇ. ತನ್ನ ಅವತಾರ ಗೋಪಾಲನಿಗೆ ಗೊತ್ತಿರಲಿಕ್ಕಿಲ್ಲ. ಸಣ್ಣಗೆ ಕೆಮ್ಮಿ ಕೇಳಿದ.

"...ಅವರ ಕುಟುಂಬ ಈಗ ಇಲ್ಲೇ ಐತಾ?'

"ಯಾರೂ? ಅವರಾ... ಇಲ್ಲೇ ಇದಾರಲ್ಲ" ಅಂದ ಗೋಪಾಲ.

"ತಮ್ಮದ್ಯಾವೂರೋ?" ಅಂದ ಮತ್ತೆ.

ಶಿವರಾವು ಯಾವುದೋ ಒಂದು ಹೇಳಿದ. ಅವನ ಬೆರಳುಗಳು ನಡುಗುತ್ತಿದ್ದವು. ಅಲ್ಲಿ ನಿಲ್ಲಲಾಗುತ್ತಿಲ್ಲ. ಚಪ್ಪರದೊಳಗಿಂದ ಹೊರಗೆ ಬಂದು ಮತ್ತೆ ಮಳೆಯಲ್ಲಿ ಕಲೆತುಹೋದ. ಕರೆಂಟು ಹೋದಂತಿದೆ. ರಸ್ತೆಯಲ್ಲಿ ದೀಪಗಳಿಲ್ಲ. ಆ ಓಣಿಯಲ್ಲಿ ತನಗೆ ತಿಳಿದಿರುವ ಮನೆಗಳಿಗೆ ಸಂಬಂಧಿಸಿದ ಆಸಾಮಿಗಳನ್ನು ಒಂದು ಸಲ ನೆನಪಿಸಿಕೊಂಡ.

ಅದೋ ಆ ತಿರುವಿನಲ್ಲೇ ಮನೆ. ಶಿವರಾವು ನಿಂತುಬಿಟ್ಟ. ಹೃದಯ ಒಂದು ಕ್ಷಣ ನಿಂತುಬಿಟ್ಟಿತು. ಒಂದೊಂದೇ ಹೆಜ್ಜೆ ಹಾಕ್ತಾ ಮನೆ ತಲುಪಿಕೊಂಡ. ಮನೆ ಸ್ವಲ್ಪ ಕುಗ್ಗಿ ಹೋದಂತಿತ್ತು. ಶಿವರಾವು ಕುಟುಂಬಕ್ಕೆ ಪೂರ್ವಿಕರು ಬಿಟ್ಟು ಹೋದ ಆಸ್ತಿ ಇದೊಂದೇ. ಮನೆಯಲ್ಲಿ ಯಾರಿದ್ದಾರೋ, ಯಾಕೆ ಉಳಿದಿದ್ದಾರೋ, ಯಾರ ಹೆಸರು ಕೂಗಿ ಬಾಗಿಲು ತಟ್ಟಬೇಕೋ...

ನಿಶ್ಶಕ್ತಿಯಿಂದ ಆ ತಂಪಿನಲ್ಲೇ ತುಸು ಹೊತ್ತು ಕಟ್ಟೆ ಮೇಲೆ ಕುಳಿತುಕೊಂಡ. ಹತ್ತು ನಿಮಿಷ ಕಳೆದ ಮೇಲೆ ನಡುಗುತ್ತಿರುವ ಹೃದಯದೊಂದಿಗೆ ಕದ ತಟ್ಟಿದ. ಹಾಗೆ ಎರಡು ನಿಮಿಷ ತಟ್ಟಿದ ಮೇಲೆ ಹೆಣ್ಣು ದನಿಯೊಂದು ಕೇಳಿಸಿತು.

"ಯಾರೂ?"

ಆ ಧ್ವನಿಯನ್ನು ಶಿವರಾವು ಗುರುತಿಸದಾದ. ನಾನೇ ಅಂತ ಹೇಳಲು ಧ್ವನಿಯೂ ಏಳದಾಯಿತು.